ನೊಣಗಳದೇ ಕಾರುಬಾರು. ಶಿವಣ್ಣನ ಅಂಗಡಿಗೆ ಹೋಗುವವರು ಅಸಹ್ಯಪಟ್ಟು ಮೂಗು ಮುಚ್ಚಿಕೊಂಡು ಹೋಗುತ್ತಿದ್ದರು. ಈಗೀಗ ಮಾಂಸವನ್ನು ಬೀದಿಯಲ್ಲಿ ಒಣಗಾಕುತ್ತಿಲ್ಲ. ಉತ್ತಮರು ಓಡಾಡುತ್ತಾರೆಂದು ಅವರವರೇ ಅರ್ಥ ಮಾಡಿಕೊಂಡು ಕೊಪ್ಪಲು, ಹಿತ್ತಲು ಆಚೀಚೆ ಎಲ್ಲೆಲ್ಲೋ ಹಾಕಿ ಒಣಗಿಸುತ್ತಾರೆ.

ಆ ವಪ್ಪಾರ ನೆರಳಲ್ಲಿ ಬಿಡುಬೀಸಾಗಿ ಬೀಡಿ ಸೇದುತ್ತಾ ಕುಂತ ಹಳೆ ತಲೆಮಾರು ಇತ್ತೀಚೆಗೆ ಬೀದಿಗಳಲ್ಲಿ ಕೊರಬಾಡಿನ ಪರಿಮಳವೇ ಇಲ್ಲ ಎಂದು ಕುಳಿತಲ್ಲೇ ಬೀಡಿಗಳನ್ನು ಗೋಡೆಗೆ ಅದುಮಿದರು. ತುಂಡು ಬೀಡಿ ಇತ್ತ ಒಗೆಯುವುದನ್ನು ಕಂಡ ಈ ಚೊಟ್ನಂಗಣ್ಣ ರಾಸುಗಳನ್ನು ಕೂಡಿ ಹಾಕುವ ತನ್ನ ಗುಡಿಸಲಿಗೆ ಬೆಂಕಿ ತಾಗಿಬಿಟ್ಟಾತು ಎನ್ನುವ ಎಚ್ಚರಿಕೆಯಲ್ಲಿ 'ಅಪ್ಪೋ ಉಷಾರು, ಎಲ್ಲಾರ ಕಿಡಿ ಹಾರಿ ಯಾವುದಾದ್ರೂ ಹೊತ್ಕಂಡಾತು. ಕೆಡ್ಸಿ ದೂರ ಎಸೀರಿ' ಎಂದು ರಾಸುಗಳನ್ನು ಅಟ್ಟುತ್ತಾ ಅತ್ತ ಹೋದನು.

ಊರೊಳಗೆ ಅಲ್ಲಲ್ಲೇ ಬೀದೀಲಿ ಇನ್ನೇನು ಜೀವ ಸಂಜೆ ಬೈಗೋ ಅಂತಾ ಇದೆ ಎಂದು ಮಲ್ಲನ ಜಗಲಿಗೆ ಹಿಡಿದಿದ್ದಾರೆ. ಈ ಸುದ್ದಿ ಹರಿದಾಡಿ ಮಲ್ಲಣ್ಣನ ಬಂಧುಬಳಗದವರು ಮಲ್ಲ ಹರೆಯದಲ್ಲಿ ಇಷ್ಟಪಡುತ್ತಿದ್ದ ತಿಂಡಿ ಊಟ ಮಾಡಿತಂದು, ಜಗುಲಿಯಲ್ಲಿ ಮಲಗಿಸಿದ್ದ ಮಲ್ಲನ ತಲೆದೆಸೇಲಿಟ್ಟು, ಅವನ ಗಲ್ಲಾ ಹಿಡಿದು 'ತಿನ್ನು ತಿನ್ನು' ಅಂತ ಬೇಡುತ್ತಿದ್ದರು. ಬಹಳ ದಿನಗಳಿಂದ ಕೈಕಾಲು ಆಡಿಸಲಾಗದೆ ಮಲಗಿದ್ದಲ್ಲೇ ಹೇಲು ಉಚ್ಚೆ ಎಲ್ಲಾ ಮಾಡುತ್ತಿದ್ದುದನ್ನು ನೋಡಿ ರೋಸಿ ಹೋಗಿದ್ದ ಮಲ್ಲನ ಅತ್ತಿಗೆ ಅನಸೂಯಕ್ಕ 'ಅಯ್ಯೋ... ಈ ಹಾಳಾದ್ ಕಣ್ಣಲ್ಲಿ ಇನ್ನೂ ಅದೇನೇನ್ ನೋಡಬೇಕೋ' ಅಂತ ಗೊಣಗಿದವಳು, 'ಇಂಥ ಜೀವ ಯಾಕೆ ಉಳಿದೈತೋ' ಎಂದಳು.

ಆ ಮಾತು ಮಲ್ಲನ ತಂಗಿ ಕಿವಿಗೆ ಬಿದ್ದು 'ಅತ್ಗೆ ನಿಮಗೊಂದು ಸಣ್ಣ ಕನಿಕರ ಬೇಡ್ವಾ? ಯಂಗಿದ್ದ ಜೀವ ಅಕ್ಕಿ ಮರಿ ತರ ಮಾಡಿ ಮಲಗಿಸಿದ್ದೀರ' ಅಂದಳು. ಈ ಮಾತಿನಿಂದ ಇಬ್ಬರಿಗೂ ಮಾತಿಗೆ ಮಾತು ಬೆಳೆದಿತ್ತು. ಗವಿರಂಗಣ್ಣ ಮತ್ತು ನಿಂಗನು ಮಲ್ಲನ ನೋಡಲು ಮನೆ ತಲುಪಿದಾಗ ಈ ಅತ್ತಿಗೆ ನಾದಿನಿಯರು ಹೀಗೆ ಆ ಮಾತು ಈ ಮಾತು ಹಿಡಿದು ವಾದಿಸುತ್ತಿದ್ದರು. ಅತ್ತ ಅದ್ಯಾರೋ ಮಲ್ಲಣ್ಣನ ಬಾಯಿಗೆ ಅದೇನೋ ತಿಂಡಿ ತುರುಕಲು ಹೋದಾಗ ಅದನ್ನು ಅರ್ಧಕ್ಕೇ ತಡೆದು ನಿಲ್ಲಿಸಿದ ಮಲ್ಲನ ಅತ್ತಿಗೆ ಅನುಸೂಯಕ್ಕ 'ಅಯ್ಯೋ ಬಿಡವ್ವಾ ಬಿಡು... ಒಂದು ತಿಂದ್ರೆ ಹೆಚ್ಚು, ಒಂದು ತಿಂದ್ರೆ ಕಡಿಮೆ, ಅದಕ್ಕೇನು ಗೊತ್ತು? ಆಮೇಲೆ ನಾನು ಕಣ್ಣೆಂದ ನೋಡಬೇಕು' ಅಂದಳು. ಆ ಮಾತಿಗೆ ಮತ್ತಷ್ಟು ಕೋಪಗೊಂಡ ಮಲ್ಲನ ತಂಗಿ ಮಹದೇವಮ್ಮ 'ಅತ್ತಿಗೆ ನೀವೇನು ನೋಡೋದು ಬ್ಯಾಡ, ಎಲ್ಲಾ ನಾವೇ ನೋಡ್ತೀವಿ' ಎಂದು ತನ್ನ ಕೋಪದ ದೃಷ್ಟಿ ಅತ್ತಿಗೆಯ ಮುಖದ ಮೇಲೆ ಹರಿಬಿಟ್ಟು ರೇಗಿದಳು. ರಕ್ತ ಸಂಬಂಧದ ಕಿಚ್ಚು ಹತ್ತಿ ಸೆರಗನ್ನು ಮುಖದ ತುಂಬಾ ಹೊದ್ದು ಮುಸಮುಸ ಅಳತೊಡಗಿದಳು.

ಅಲ್ಲೇ ನಿಂತು ಎಲ್ಲವನ್ನೂ ನೋಡುತ್ತಿದ್ದ ಗವಿರಂಗಣ್ಣ ಮಲ್ಲನನ್ನು ನೋಡಿ 'ಹುಲಿ ಇದ್ದಂಗಿದ್ದ' ಅಂತ ಗೊಣಗಿಕೊಂಡರು. ಅಂಜುತ್ತಲೇ ಒಂದು ಚೂರು ಮುಂದೆ ಬಂದ ನಿಂಗನು ತದೇಕಚಿತ್ತದಿಂದ ಮಲ್ಲನ ದೇಹವನ್ನು ನೋಡಿದ. ಅವನ ದೇಹದ ಎಲ್ಲಾ ಭಾಗಗಳಿಗೂ ಜಡತ್ವ ಬಂದಿರುವುದು ಅವನ ಕಣ್ಣಿಗೆ ಎದ್ದು ಕಾಣುತ್ತಿತ್ತು. ಕ್ಷಣ ತಬ್ಬಿಬ್ಬಾದಂತೆ ನಿಂತನು. ಪುಟ ತಿರುವಿದಂತೆ ಹಳೆಯದೆಲ್ಲಾ ಕಣ್ಣು ಮುಂದೆ ಬಂದಿತು. ಫಸಲು ಮಾರಾಟ ಮಾಡಿ ಬರುವಾಗ ನಮ್ಮ ಅಟ್ಟಿಯ ಹೆಂಗಸರಿಗೆ ಅದೆಲ್ಲಿಂದಲೋ ಸೀರೆ ತಂದು ಅವರ ಕೈಗೂ ಕೊಡದೆ ಬೀದಿಯಲ್ಲಿ ನಿಂತು ಎಸೆಯುತ್ತಿದ್ದ. ನಮ್ಮ ಅಟ್ಟಿ ಹೆಂಗಸರೆಲ್ಲರ ಹೆಸರೂ ಗೊತ್ತಿತ್ತು. ಅವರ ಬೆವರ ವಾಸನೆ ಗೊತ್ತಿತ್ತು. ತನ್ನ ಬುಡದಲ್ಲಿ ಒಂದು ಗರಿಕೆ ಕೂಡ ಬೆಳೆಯಲು ಬಿಡದ ದೊಡ್ಡ ಆಲದ ಮರ ಬಿದ್ದುಹೋಗುತ್ತಿರುವಂತೆ ನಿಂಗನ ಕಣ್ಣಿಗೆ ಕಂಡಿತು.

ನಿರ್ಜೀವ ಎನ್ನುವಂತೆ ಮಲಗಿದ್ದ ಮಲ್ಲನ ಕೈಕಾಲುಗಳು ಆಡಿದವು. ಮಲ್ಲನ ಕಣ್ಣಲ್ಲಿ ನೀರು ಹರಿಯತೊಡಗಿತು. ಎಲ್ಲವನ್ನೂ ನೋಡುತ್ತಾ ನಿಂತಿದ್ದ ಗವಿರಂಗಣ್ಣನವರು ತಟ್ಟನೆ ಎಚ್ಚರಾದಂತೆ ಅಳುತ್ತಿದ್ದ ಮಲ್ಲನ ತಂಗಿಯನ್ನು ಎಚ್ಚರಿಸಿ 'ಅಯ್ಯೋ ಅಣ್ಣ ಕಣ್ಣೀರಾಕ್ತಾವ್ನೆ' ಅಂದರು. ಮಲ್ಲನ ತಂಗಿ ಮಹದೇವಮ್ಮ ತನ್ನ ಸೆರಗಿನಿಂದ ಅಣ್ಣನ ಕಣ್ಣೀರು ವರೆಸಿ 'ಅಯ್ಯೋ ನೀನ್ಯಾಕೆ ಅಳುತ್ತಿಯ, ನಾವು ನಿನ್ನನ್ನ ನೋಡ್ಕತೀವಿ ಸುಮ್ನಿರು' ಎಂದು ಸಮಾಧಾನಿಸಲು ಪ್ರಯತ್ನಿಸಿದಳಾದರೂ ತಾನೇ ಸಮಾಧಾನದಿಂದ ಇರಲು ಸಾಧ್ಯವಾಗಲಿಲ್ಲ. ತನ್ನ ಕಣ್ಣಲ್ಲಿ ಧುಮ್ಮಿಕ್ಕಿದ ಕಣ್ಣೀರನ್ನು ಒರೆಸಿಕೊಳ್ಳುತ್ತಿದ್ದಳು.

ಅತ್ತಿತ್ತ ಅಲುಗಾಡಿದಂತೆ ಕಂಡ ಮಲ್ಲನ ದೇಹ ಏರು ಹೊಡೆದ ಸೈಕಲ್ ಟ್ಯೂಬಿನಂತೆ ನಿಮಿರಿತು. ಯಂಥದ್ದೋ ಗೊರಗೊರ ಎಂದು ಸದ್ದು ಮಾಡಿತು. ಮಲ್ಲನ ಪ್ರಾಣ ಪಕ್ಷಿ ಹಾರಿಹೋಯಿತು. ಅಲ್ಲೇ ನಿಂತ ಗವಿರಂಗಣ್ಣನ ಮನಸ್ಸು 'ಯಾವ ಜನ್ಮ ತೊರೆದು ಬಂದ ಕಲ್ಲೋ ಇದು. ಈಗ ಮರುಗಿ ಕೊರಗಿ ಕರಗಿಹೋಗುತ್ತಿದೆ' ಎಂದು ಮಾತಾಡಿತು.

ಅಣ್ಣನ ಸಮಾಧಾನ ಮಾಡುತ್ತಿದ್ದ ಮಹದೇವಮ್ಮ ಎದ್ದು ಒತ್ತಟ್ಟೆ ಒಂದು ಮೂಲೆಗೆ ಹೋಗಿ ಲಬೋ ಲಬೋ ಬಾಯಿ ಬಡಿದುಕೊಂಡಳು. ಅವಳ ಆಕ್ರಂದನ ಕಂಡು 'ಎಷ್ಟೇ ಆದರೂ ಅವರವರ ಕರಳು ಅವರನ್ನ ಬಿಡುತ್ತಾ?' ಎಂದು ಗವಿರಂಗಣ್ಣ ಪಕ್ಕದಲ್ಲಿದ್ದ ನಿಂಗನಿಗೆ ಹೇಳಿದ.

ಎಲೆಯ ಮರೆಯಲ್ಲಿ ಹಕ್ಕಿ ಇಣುಕಿದಂತೆ ಇಣುಕಿದ ನಿಂಗನಲ್ಲಿ ಮಲ್ಲನಿಗೆ ವಿದಾಯ ಹೇಳಲೂ ಸಹ ಮಾತುಗಳಿರಲಿಲ್ಲ. ಹೆಣದ ಮುಂದೆ ಸುತ್ತುವರೆದ ಜನರ ಮಾತುಗಳು ಹೆಚ್ಚಾದವು. ನಿಂಗನು ಹಟ್ಟಿಗೆ ಹಿಂತಿರುಗಿದ. ತನ್ನ ಕೊಟ್ಟಿಗೆಯ ನೆರಿಕೆ ಸರಿ ಮಾಡಿದ. ರಾಸುಗಳ ಜೊತೆಗೆ ಒಂದಾದ.

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in





**ಹೆಜ್ಜೆಗುರುತುಗಳ ಜಾಡು ಹಿಡಿದು...**

ಕಿರುತೆರೆಯ ಜನಪ್ರಿಯ ನಟಿ ಅಮೃತಾ ಮುತ್ತಣ್ಣ ಅಲಿಯಾಸ್ ಅಮ್ಮು ಕೊಲೆಯಾಗಿದ್ದಾಳೆ. ಈ ಒಂಟಿ ತಾರೆಯನ್ನು ಅವಳ ಮನೆಯಲ್ಲಿಯೇ ಕೊಂದವರು ಯಾರು? ಕೊಲೆಯ ಸಿಕ್ಕುಗಳನ್ನು ಬಿಡಿಸುತ್ತಾ ಹೊರಟ ಪೊಲೀಸ್ ಅಧಿಕಾರಿ ಮಾಯಣ್ಣನ ಎದುರು ನಿಂತಿದ್ದು ಯಾರು ಯಾರು? ಅಪರಾಧದ ಹೆಜ್ಜೆಗುರುತುಗಳ ಹುಡುಕಾಟದ ಹಾದಿಯಲ್ಲಿ, ಪೊಲೀಸ್ ತನಿಖೆಯ ಕಸುಬುದಾರಿಕೆಯ ಒಳನೋಟಗಳನ್ನು ಚಿತ್ರಿಸುವ, ಮನಸ್ಸಿನ ಒಳಗುದಿಗಳನ್ನು ಒರೆಗೆ ಹಚ್ಚುವ, ಮನುಷ್ಯ ಸ್ವಭಾವಗಳನ್ನು ವಿಶ್ಲೇಷಿಸುವ, ವಿಶಿಷ್ಟ ಕಥನ.

**ಮುಂದಿನ ವಾರದಿಂದ ಆರಂಭ**